ಕರ್ನಾಟಕ ವಿಧಾನಸಭೆ

12ನೇ ವಿಧಾನಸಭೆ
2ನೇ ಅಧಿವೇಶನ
ಮುಂದುವರೆದ ಉಪವೇಶನ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5060
ಉತ್ತರಿಸಬೇಕಾದ ದಿನಾಂಕ : 11.07.2005
ವಿಧಾನಸಭೆಗೆ ಸದಸ್ಯರ ಹೆಸರು : ಶ್ರೀ ಸಿದ್ದು ಸಾವದಿ (ಜಮಖಂಡಿ)
ವಿಷಯ : ಪಹಣಿ ಪತ್ರಿಕೆ ಮತ್ತು ಬಾಂಡ್ ಪೇಪರ್‌ಗಳನ್ನು ಹೋಬಳಿ ಮಟ್ಟದಲ್ಲಿ ವಿತರಿಸುವುದು.

	ಪ್ರಶ್ನೆ	ಉತ್ತರ
1	ಜಮಖಂಡಿ ತಾಲ್ಲೂಕಿನಲ್ಲಿ ಪಹಣಿ ಉತಾರ ಮತ್ತು ಬಾಂಡ್ ಪೇಪರ್ ಗಳನ್ನು ಪಡೆಯಲು ರೈತರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ;	**ಪಹಣಿ ಉತಾರ** ಇಲ್ಲ. **ಬಾಂಡ್ ಪೇಪರ್** ದಿನಾಂಕ 1.4.2003ರಿಂದ ಜಾರಿಗೆ ಬರುವಂತೆ ಬಾಂಡ್ ಪೇಪರ್‌ಗಳ ಉಪಯೋಗವನ್ನು ರಾಜ್ಯಾದ್ಯಂತ ಸ್ಥಗಿತ ಗೊಳಿಸಲಾಗಿದೆ. ನೋಂದಣಿ ಕಡ್ಡಾಯ ವಾಗಿರುವ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕವನ್ನು ಡಿ.ಡಿ./ಪಿ.ಒ./ ಎಸ್.ಬಿ.ಎಂ. ರಸೀತಿ ಇವುಗಳ ಮೂಲಕ ಪಾವತಿಸಲು ಅವಕಾಶ ನೀಡಲಾಗಿದೆ. ನೋಂದಣಿ ಐಚ್ಛಿಕವಾಗಿರುವ ದಸ್ತಾ ವೇಜುಗಳನ್ನು ಬರೆದುಕೊಳ್ಳಲು ಎಸ್.ಬಿ.ಎಂ.ನಿಂದ ಡಾಕ್ಯುಮೆಂಟ್ ಷೀಟುಗಳನ್ನು ಬಿಡುಗಡೆಗೊಳಿಸಲಾಗಿದೆ. ರಾಜ್ಯದಲ್ಲಿ 211 ಎಸ್.ಬಿ.ಎಂ. ಶಾಖೆ ಗಳಿಂದ ಡಾಕ್ಯುಮೆಂಟ್ ಷೀಟುಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ.

		ಅದೇ ರೀತಿ ಜಮಖಂಡಿ ಎಸ್.ಬಿ.ಎಂ. ನಲ್ಲಿ ಸಹ ಸದರಿ ಡಾಕ್ಯುಮೆಂಟ್ ಷೀಟುಗಳನ್ನು ನೀಡಲಾಗುತ್ತಿದೆ.
2	ಇವುಗಳನ್ನು ಹೋಬಳಿ ಮಟ್ಟದಲ್ಲಿ ವಿತರಿಸುವಂತೆ ಒಂದು ವರ್ಷದ ಹಿಂದೆಯೇ ಮನವಿ ಮಾಡಿದ್ದರೂ ಸಹ ಈ ವ್ಯವಸ್ಥೆಯನ್ನು ಜಾರಿಗೆ ತರದೆ ಇರಲು ಕಾರಣವೇನು; ಹಾಗೂ ಇರುವ ತೊಂದರೆಗಳೇನು;	**ಪಹಣಿ ಉತಾರ** ಸಾರ್ವಜನಿಕ ಖಾಸಗಿ ಸಹಭಾಗಿತ್ವ ದೊಂದಿಗೆ ಗ್ರಾಮ ಮಟ್ಟದಲ್ಲಿ ಕಿಯಾಸ್ಕ್ ಗಳನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆ. ಖಾಸಗಿಯವರಿಗೆ ಗಣಕೀಕೃತ ಕಿಯಾಸ್ಕ್‌ಗಳನ್ನು ತೆರೆಯಲು ಅನುಮತಿ ನೀಡುವ ಕುರಿತಾದ "ವಿವರ ಗಳನ್ನು ಅಂತಿಮಗೊಳಿಸಲಾಗುತ್ತಿದೆ. **ಬಾಂಡ್ ಪೇಪರ್** ತಾಲ್ಲೂಕು ಮಟ್ಟದಲ್ಲಿ ಡಾಕ್ಯುಮೆಂಟ್ ಷೀಟುಗಳನ್ನು ವಿತರಿಸಲಾಗುತ್ತಿದ್ದು, ಎಸ್.ಬಿ.ಎಂ.ನ ಎಲ್ಲಾ ಶಾಖೆ ಗಳಿಂದಲೂ ಡಾಕ್ಯುಮೆಂಟ್ ಷೀಟು ಗಳನ್ನು ವಿತರಣೆ ಮಾಡುವ ಸಲುವಾಗಿ ವ್ಯವಸ್ಥೆಯನ್ನು ಮಾಡಲಾಗುವುದು. ಹೋಬಳಿ ಮಟ್ಟದಲ್ಲಿ ಎಸ್.ಬಿ.ಎಂ. ಶಾಖೆಗಳು ಇದ್ದಲ್ಲಿ. ಸದರಿ ಶಾಖೆ ಯಲ್ಲಿಯೂ ಸಹ ಡಾಕ್ಯುಮೆಂಟ್ ಷೀಟುಗಳನ್ನು ವಿತರಿಸಲು ಎಸ್.ಬಿ.ಎಂ. ರವರೊಂದಿಗೆ ವ್ಯವಸ್ಥೆ ಮಾಡಲಾಗು ವುದು. ಡಾಕ್ಯುಮೆಂಟ್ ಷೀಟುಗಳನ್ನು ಬೇರೆ ಬ್ಯಾಂಕುಗಳಿಂದ ಅಥವಾ ಇತರೇ ಸಂಸ್ಥೆಗಳ ಮೂಲಕ ವಿತರಿಸಲು ಆಡಳಿತಾತ್ಮಕ ದೃಷ್ಟಿಯಿಂದ, ಸಂರಕ್ಷಣೆ ದೃಷ್ಟಿಯಿಂದ ಹಾಗೂ ವಿತರಣೆಗಾಗಿ ತಗಲುವ ವೆಚ್ಚವು ದುಬಾರಿ ಯಾಗುವುದರಿಂದ ಕಷ್ಟಕರವಾಗುತ್ತವೆ.

3	ಇದಕ್ಕಾಗಿ ತಾಲ್ಲೂಕು ಕೇಂದ್ರಗಳಿಗೆ ಹೋಗಿ ನೂರಾರು ರೂಪಾಯಿ ಖರ್ಚು ಮಾಡಿದರೂ ಸಹ ಬಾಂಡ್ ಮತ್ತು ಉತಾರಗಳು ಸಿಗದೆ ರೈತರು ತೊಂದರೆ ಪಡುತ್ತಿದ್ದು ಇದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?	**ಪಹಣಿ ಉತಾರ** ಈ ಯೋಜನೆಯನ್ನು ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಿದ ನಂತರ ರೈತರು ಪಹಣಿ ಉತಾರ ಪಡೆಯಲು ತಾಲ್ಲೂಕು ಕೇಂದ್ರಕ್ಕೆ ಬರುವ ಅವಶ್ಯಕತೆ ಇರುವುದಿಲ್ಲ. **ಬಾಂಡ್ ಪೇಪರ್** ಮೇಲೆ ವಿವರಿಸಿರುವಂತೆ ನೋಂದಣಿ ಕಡ್ಡಾಯವಿರುವ ದಸ್ತಾವೇಜುಗಳಿಗೆ ಯಾವ ತೊಂದರೆಗಳು ಇರುವುದಿಲ್ಲ ವೆಂದು ತಿಳಿಸಲಾಗಿದೆ. ಡಾಕ್ಯುಮೆಂಟ್ ಷೀಟುಗಳ ಮೂಲಕ ಬರೆದುಕೊಳ್ಳುವ ಐಚ್ಛಿಕ ನೋಂದಣಿ ಪತ್ರಗಳಿಗೆ ಮಾತ್ರ ತಾಲ್ಲೂಕು ಕೇಂದ್ರಗಳಿಗೆ ಹೋಗ ಬೇಕಾಗಿರುತ್ತೆ. ಇದಲ್ಲದೇ ಪತ್ರವನ್ನು ಬಿಳಿ ಹಾಳೆಯ ಮೇಲೆ ಬರೆದುಕೊಂಡು ನೋಂದಣಿ ಕಛೇರಿಗೆ ಹೋಗಿ ಮುದ್ರಾಂಕಿಸಿಕೊಳ್ಳಬಹುದಾಗಿದೆ.

ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ : 292 (5060)

ಉತ್ತರ ಪಟ್ಟಿಯನ್ನು ಲಗತ್ತಿಸಿದೆ.

ಶ್ರೀ ಸಿದ್ದುಸಾವದಿ :– ಮಾನ್ಯ ಅಧ್ಯಕ್ಷರೇ, ಈ ಡಾಕ್ಯುಮೆಂಟ್ ಶೀಟ್ ಅಥವಾ ಪಹಣಿ ಉತಾರಗಳನ್ನು ತಾಲ್ಲೂಕು ಮಟ್ಟದಲ್ಲಿ ವಿತರಣೆ ಮಾಡುವಂಥಾದ್ದು ಕೇವಲ ಒಂದು ಸ್ಥಾನದಲ್ಲಿ ಮಾಡುವುದರಿಂದ ರೈತರು ಸುಮಾರು ತಾಲ್ಲೂಕು ಹೆಡ್ ಕ್ವಾಟ್ರಸನಿಂದ ಸುಮಾರು 40–50 ಕಿ.ಮೀ. ದೂರದಲ್ಲಿರುವ ಹಳ್ಳಿಗಳಿಂದ ರೈತರು ಬಂದು ಒಂದು ದಿವಸ ಪೂರ್ತಿ ಆ ಸರದಿಯಲ್ಲಿ ಕಾಯ್ದು, ನಿಲ್ಲುತ್ತಾರೆ. ಆದರೆ ಈ ಡಾಕ್ಯುಮೆಂಟ್ ಶೀಟ್‌ಗಳ ವಿತರಣೆಯನ್ನು ಎರಡೂವರೆ ಗಂಟೆಗಳಿಗೆ ಕ್ಲೋಸ್ ಮಾಡುತ್ತಾರೆ. ಇಲ್ಲಿ ರಿಸರ್ವೇಶನ್ ಕಾರ್ಯಕ್ಕೆಂದು ಬಂದಂತಹ ರೈತನು ಅವನ ಜೊತೆಯಲ್ಲಿ ಬರುವಾಗ ಹತ್ತಾರು ಜನ ರೈತರುಗಳನ್ನು ಕರೆದುಕೊಂಡು ಬಂದಿರುತ್ತಾನೆ. ಆದರೆ ಅವರು ಸರದಿಯಲ್ಲಿ ಸುಮಾರು ಎರಡೂವರೆ ಗಂಟೆಗಳ ಕಾಲ ಕಾಯ್ದುಕೊಂಡು, ಅವನ ಸರದಿಯು ಬರದೇ, ಅವನು ಇಡೀ ಕುಟುಂಬ ವನ್ನು ಕರೆದುಕೊಂಡು ತನ್ನ ಊರಿಗೆ ಹೋಗುವಂತಹ ಸ್ಥಿತಿ ರೈತರಿಗೆ ಇದೆ. ನಾವು ಈ ಡಾಕ್ಯುಮೆಂಟ್ ಶೀಟ್‌ಗಳನ್ನು ಹೋಬಳಿ ಮಟ್ಟದಲ್ಲಿ ವಿತರಣೆ ಮಾಡುವ ಸಲುವಾಗಿ ಈಗಾಗಲೇ ನಾವು ಎರಡು, ಮೂರು ಬಾರಿ ಮನವಿಯನ್ನು ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತಹ ಇಲಾಖಾಧಿಕಾರಿ ಗಳು, ಇದರ ಬಗ್ಗೆ ನಾವು ಕೇಳಿದಾಗ ಇನ್ನು ಒಂದು ವರ್ಷದಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದೆಂದು ಮೌಖಿಕವಾಗಿ ಹೇಳುತ್ತಾರೆಯೇ, ವಿನಃ ಅದನ್ನು ಆಡಳಿತಾತ್ಮಕವಾಗಿ ಜಾರಿಗೆ ತಂದಿಲ್ಲ. ಈ ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತಂದು, ಇದು ಹೋಬಳಿ ಮಟ್ಟದಲ್ಲಿ ಜಾರಿಯಾಗುವಂತೆ ಆಗಬೇಕು. ಅದು ಅಲ್ಲದೇ ಕೇವಲ ಎರಡೂವರೆ ಗಂಟೆಯವರೆಗೆ ಈ ಡಾಕ್ಯುಮೆಂಟ್ ಶೀಟ್‌ಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಕ್ಲೋಸ್ ಮಾಡುವುದರಿಂದ, ಇಲ್ಲಿ ರೈತರು ಸರದಿಯಲ್ಲಿ ಸರದಿಯಲ್ಲಿ ಕಾಯುವಂಥಾದ್ದು, ಅವರು ತಮ್ಮ ಉದ್ಯೋಗವನ್ನು ಹಾಳು ಮಾಡಿಕೊಂಡು ತಾಲ್ಲೂಕಿಗೆ ಬಂದು ನೂರಾರು ರೂಪಾಯಿಗಳನ್ನು ಕಳೆದುಕೊಳ್ಳುವಂಥದ್ದು ಆಗುತ್ತಿದೆ. ಆದುದರಿಂದ ಈ ಟೈಮ್ ಅನ್ನು ಎಕ್ಸ್‌ಟೆಂಡ್

ಮಾಡಿ, ಅದನ್ನು 5 ಗಂಟೆಯವರೆಗೂ ವಿಸ್ತರಣೆ ಮಾಡಿ, ಡಾಕ್ಯುಮೆಂಟ್ ಶೀಟ್ ಅನ್ನು ಕೊಡುವಂತಹ ವ್ಯವಸ್ಥೆಯಾಗಬೇಕೆಂದು, ಈ ನನ್ನ ಮನವಿಯನ್ನು ಕಾರ್ಯಗತಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಪಹಣಿ ಪತ್ರಕ್ಕೂ ನನ್ನ ಕ್ಷೇತ್ರವಾದ ಜಮಖಂಡಿ ದೊಡ್ಡ ತಾಲ್ಲೂಕು ಆಗಿದೆ. ಈ ಪಹಣಿ ಪತ್ರ 15ರೂ. ಗಳಿಗೆ ರೈತರಿಗೆ ಸಿಗುವಂತಹ, ಪಹಣಿ ಪತ್ರಕ್ಕೆ ಈ ಹಿಂದೆ ಆತನ ಹಳ್ಳಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಿಂದ 2 ರೂ. ಗಳಿಂದ 5 ರೂ.ಗಳನ್ನು ಕೊಟ್ಟರೆ ಸಿಗುವಂತಹ ಒಂದು ಪಹಣಿ ಪತ್ರಕ್ಕೆ ಇವರು 15 ರೂ. ಗಳಿಗೆ ಸಿಗುವಂಥಾದ್ದಕ್ಕೆ ನೂರಾರು ರೂಪಾಯಿಗಳನ್ನು ಖರ್ಚು ಮಾಡಿ ಸರದಿಯಲ್ಲಿ ಕಾಯಬೇಕಾಗುತ್ತದೆ. ಅದು ಒಂದು ದಿವಸವೂ, ಎರಡು ದಿವಸವೂ, ಈ ರೀತಿಯ ಅಸ್ತವ್ಯಸ್ತವಾಗಿ, ಆ ರೈತರ ಉದ್ಯೋಗವೂ ಹಾಳಾಗುತ್ತದೆ. ಇದು ನೂರು ರೂಪಾಯಿಯಿಂದ 500 ರೂಪಾಯಿಗಳ ವರೆಗೂ ಖರ್ಚಾಗಿ ರೈತರಿಗೆ ದುಬಾರಿಯಾಗುವುದರಿಂದ, ಅದನ್ನು ತಕ್ಷಣ ಹೋಬಳಿ ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ ಕೊಡುವಂತಹ ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತರುವಂಥಾದ್ದು ಆಗಬೇಕು. ಇದರ ಬಗ್ಗೆ ಸರ್ಕಾರ ಮನಸ್ಸು ಮಾಡಬೇಕು, ಏಕೆಂದರೆ ಇಲ್ಲಿ ಗ್ರಾಮ ಮಟ್ಟಕ್ಕೆ ತರುತ್ತೇವೆಂದು ಒಂದು ಯೋಜನೆಯನ್ನು ಹಾಕಿದ್ದೇವೆ. ಆ ಯೋಜನೆ ಇನ್ನು ಜಾರಿಗೆ ತರುವುದಕ್ಕೆ ತಯಾರಿಲ್ಲ. ಈ ವ್ಯವಸ್ಥೆ ತಕ್ಷಣ ಆಗಬೇಕು. ಇದರಿಂದ ಕೊಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ಸಂದಾಯವಾಗುತ್ತಿದ್ದರೂ ಸಹಿತ, ಈ ವ್ಯವಸ್ಥೆಯನ್ನು ಸರಳೀಕರಣ ಮಾಡಿ ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ, ಮತ್ತು ಮೂಲ ಸೌಲಭ್ಯ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ)

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ಪ್ರಸ್ತಾಪ ಮಾಡಿರುವಂತಹ ವಿಚಾರಗಳು ಸತ್ಯವಿದೆ. ಈ ವಿಚಾರದಲ್ಲಿ ರೈತರಿಗೆ ಸ್ವಲ್ಪ ಮಟ್ಟಿನ ಅಡಚಣೆ ಯಾಗಿರುವಂಥಾದ್ದು ಸರ್ಕಾರ ಒಪ್ಪುತ್ತದೆ. ನಾನು ಇದರ ಬಗ್ಗೆ ಉತ್ತರದಲ್ಲಿ ಕೊಟ್ಟಿದ್ದೇನೆ. ಇದನ್ನು ಪಂಚಾಯತ್ ಮಟ್ಟಕ್ಕೆ ತೆಗೆದುಕೊಂಡು ಹೋಗ ಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಇದರ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡು ಎಲ್ಲಾ ಪಂಚಾಯತ್

ಮಟ್ಟದಲ್ಲೂ ಸಹಿತ ಈ ವ್ಯವಸ್ಥೆಯನ್ನು ವಿಕೇಂದ್ರೀಕರಣ ಮಾಡುವಂತಹ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಇದನ್ನು ಸದ್ಯದಲ್ಲೆ ಜಾರಿಗೆ ತರುವಂಥಾದ್ದಕ್ಕೆ ನಾವು ಪ್ರಯತ್ನವನ್ನು ಮಾಡುತೇವೆ.

ಪ್ರಶ್ನೆ : 397(4914)

ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ.

ಪ್ರಶ್ನೆ : 399(5179)

ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ವೈಜನಾಥ ಪಾಟೀಲ್‌ರವರ ಪ್ರಶ್ನೆ ಮೊದಲು ಇದೆ. ಅದನ್ನು ಏಕೆ ಬಿಟ್ಟಿದ್ದೀರಿ ?

ಅಧ್ಯಕ್ಷರು :– ಮಾನ್ಯ ಲೋಕೋಪಯೋಗಿ ಸಚಿವರು ವಿಧಾನ ಪರಿಷತ್ತಿನಲ್ಲಿ ಸ್ಟೇಟ್‌ಮೆಂಟ್ ಮಾಡಲು ಹೋಗಿದ್ದಾರೆ. ಅವರು ಇಲ್ಲಿಗೆ ಬಂದಮೇಲೆ ಅದನ್ನು ತೆಗೆದುಕೊಳ್ಳೋಣ.